ದಿನಾಂಕಃ 08-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ</u>- ಪ್ರತಿವಾದಿ ಪರವಾಗಿ ಶ್ರೀ. ಎಂ.ಎಸ್. ವಕೀಲರಿಂದಃ-**

ನನ್ನ ಊರು ಸಜ್ಜೆಹೊಸಹಳ್ಳಿ ಆಗಿರುತ್ತದೆ. ನಮ್ಮ ಊರಿನಿಂದ ಕಿತ್ತಗಳಿ ಒಂದೂವರೆ ಕಿ.ಮೀ. ದೂರದಲ್ಲಿದೆ. ವಾದಿ ನನ್ನ ಸಂಬಂಧಿಕರು. ನಾನು ವ್ಯವಸಾಯ ಮಾಡುತ್ತೇನೆ. ನಾನು ಈ ಹಿಂದೆ ಬೆಂಗಳೂರಿನ ಒಂದು ಶಾಲಾ ವಾಹನದ ಮಾಲೀಕ ಮತ್ತು ಚಾಲಕನಾಗಿ ಕೆಲಸ ಮಾಡುತ್ತಿದ್ದೆನು. ನಾನು ಸುಮಾರು 20 ವರ್ಷಗಳ ಕಾಲ ಬೆಂಗಳೂರಿನಲ್ಲಿದ್ದೆನು. ನಾನು ಕಳೆದ 8 ವರ್ಷಗಳಿಂದ ನಮ್ಮ ಊರಿನಲ್ಲಿಯೇ ವಾಸವಾಗಿರುತ್ತೇನೆ. ಕಿತ್ತಗಳಿಯ ಚಿಕ್ಕಣ್ಣನವರು ಗೊತ್ತು. ಅವರ ತಂದೆ ತಾಯಿಯ ಹೆಸರು ನನಗೆ ಗೊತ್ತಿಲ್ಲ. ಚಿಕ್ಕಣ್ಣನವರಿಗೆ ಅಶ್ವತ್ಥಪ್ಪ ಎಂಬ ಒಬ್ಬ ಮಗನಿದ್ದನು. ದಾವಾ ಆಸ್ತಿಯ ಅಕ್ಕ ಪಕ್ಕದಲ್ಲಿ ನನಗೆ ಸೇರಿದ ಜಮೀನುಗಳು ಇರುವುದಿಲ್ಲ. ನನ್ನ ಚಿಕ್ಕಪ್ಪ ಅಶ್ವತ್ಥಪ್ಪನವರು ಕೆಲವು ಜಮೀನುಗಳನ್ನು ಖರೀದಿಸಿದ್ದು, ಅವುಗಳನ್ನು ಯಾರಿಂದ ಖರೀದಿಸಿದರು ಎಂಬುದು ನನಗೆ ಗೊತ್ತಿಲ್ಲ. ನನ್ನ ಚಿಕ್ಕಪ್ಪನಿಗೆ ಎಷ್ಟು ಪಿತ್ರಾರ್ಜಿತವಾದ ಮತ್ತು ಸ್ವಯಾರ್ಜಿತವಾದ ಆಸ್ತಿಗಳು ಇದ್ದವು ಎಂಬುದು ನನಗೆ ಗೊತ್ತಿಲ್ಲ. ಈ ದಾವೆಯನ್ನು ವಾದಿ ಎಷ್ಟು ಆಸ್ತಿಗಳ ಮೇಲೆ ಸಲ್ಲಿಸಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ವಾದಿ ಸರ್ವೆ ನಂಬರ್ 112, 113, 118 ಮತ್ತು 129 ರ ಆಸ್ತಿಗಳ ಮೇಲೆ ದಾವೆ ಸಲ್ಲಿಸಿರುತ್ತಾರೆ. ಆ ಆಸ್ತಿಗಳ ಚೆಕ್ಕುಬಂಧಿ ನನಗೆ ಗೊತ್ತಿಲ್ಲ. ಅಶ್ವತ್ಥಪ್ಪನಿಗೆ ಚೌಡಮ್ಮ, ಚೌಡಪ್ಪ ಮತ್ತು ಲೀಲಾಧರ ಎಂಬ ಮಕ್ಕಳುಳಿದ್ದಾರೆ. ಅಶ್ವತ್ಥಪ್ಪನಿಗೆ ನಾಲ್ಕು ಜನ ಮಕ್ಕಳುಳಿದ್ದಾರೆ ಎಂದರೆ ಸರಿಯಲ್ಲ. ಅಶ್ವತ್ಥಪ್ಪನಿಗೆ ಗೋಪಾಲ ಎಂಬ ಮಗ ಇದ್ದು, ಆತ ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಕಳೆದ 40 ವರ್ಷಗಳಿಂದಲೂ ಸಹ ವಾದಿ ಮತ್ತು ಪ್ರತಿವಾದಿಯರು ದಾವಾ ಆಸ್ತಿಗಳಲ್ಲಿ ಜಂಟಿ ಸ್ವಾಧೀನಾನುಭವ ಹೊಂದಿರುತ್ತಾರೆ. ವಾದಿ ಮತ್ತು ಪ್ರತಿವಾದಿಯರ ನಡುವೆ ಆದ ಪಂಚಾಯಿತಿಯಲ್ಲಿ ನಾನು ಸಹ ಹಾಜರಿದ್ದೆನು ಆದರೆ ಯಾವ ದಿನಾಕ ಎಂಬುದು ನನಗೆ ಗೊತ್ತಿಲ್ಲ. ಆಗ ಮಧ್ಯಾಹ್ನ 12.30 ರಿಂದ ಸಂಜೆ 4.00 ಗಂಟೆವರೆಗೆ ಪಂಚಾಯಿತಿ ಮಾಡಿದ್ರು, ಆ ಪಂಚಾಯಿತಿ ವಿಫಲವಾಗಿರುತ್ತದೆ. ಆ ಪಂಚಾಯಿತಿಗೆ ಎಷ್ಟು ಜನ ಸೇರಿದ್ದರು ಎಂಬುದು ನನಗೆ ಗೊತ್ತಿಲ್ಲ. ಅಶ್ವತ್ಥಪ್ಪನವರು ಅವರ ಕುಟುಂಬದ ಒಂದು ಆಸ್ತಿಯನ್ನು ತುಂಬಾ ವರ್ಷಗಳ ಹಿಂದೆ ಮಾರಾಟ ಮಾಡಿದ್ದರು. 2010 ನೇ ಸಾಲಿನಲ್ಲಿ ವಾದಿ ಮತ್ತು ಪ್ರತಿವಾದಿಯರ ತಂದೆ ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಆ ವಿಭಾಗದಂತೆ ಸ್ವಾಧೀನಾನುಭವ ಹೊಂದಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿ ಲ್ಯಾಬ್ ಟೆಕ್ನೀಷಿಯನ್ ಆಗಿ ಕೆಲಸ ಮಾಡುತ್ತಿದ್ದು, ಅದರಿಂದ ಬಂದ ಆದಾಯದಿಂದ ದಾವಾ ಆಸ್ತಿಗಳಲ್ಲಿ ಬೋರ್ ವೆಲ್ ಕೊರೆಸಿ ಫಲವತ್ತತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಈಗ ಆರೋಗ್ಯವಾಗಿದ್ದಾರೆ ಎಂದರೆ ಸರಿಯಲ್ಲ. ವಾದಿ ನನ್ನ ಸಂಬಂಧಿಕಾರಾದ ಕಾರಣ ನಾನು ದಾವಾ ಆಸ್ತಿಗಳನ್ನು ನೋಡಿರದೇ ಇದ್ದರೂ ಸಹ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್

ಓಎಸ್.163/2023

ಪಿಡಬ್ಲ್ಯು-2

ಮತ್ತು ಜೆಎಂಎಫ್‌ಸಿ, ಮಧುಗಿರಿ